# ಮಂಗಳೂರು ವಿಶ್ವವಿದ್ಯಾನಿಲಯ

**(NAAC ನಿಂದ ಮಾನ್ಯತೆ ಹೊಂದಿದೆ)**

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ- 574199
ಕರ್ನಾಟಕ ರಾಜ್ಯ, ಭಾರತ.

Office of the Registrar
Mangalagangothri- 574199
Karnataka State, India

---

ಸಂಖ್ಯೆ: ಮಂವಿ/ಕುಸ/ಸಿಂಡಿ(ಎಸ್2)/33/2026/152998

ದಿನಾಂಕ: 08.09.2026

ರಿಗೆ:

**ಸಿಂಡಿಕೇಟಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.**

ಮಾನ್ಯರೇ,

ವಿಷಯ: ದಿನಾಂಕ 29.08.2026ರಂದು ನಡೆದ ಸಿಂಡಿಕೇಟಿನ 2026ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಯ ಬಗ್ಗೆ.

------

ದಿನಾಂಕ *29.08.2026* ರಂದು ನಡೆದ ಸಿಂಡಿಕೇಟಿನ *2026*ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಯನ್ನು ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

**ಕುಲಸಚಿವರು**

**ಪ್ರತಿಗಳು:**

1. ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಲೋಕಭವನ, ಬೆಂಗಳೂರು-*560001* – ಇವರ ಗಮನಕ್ಕೆ.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

<u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 29.08.2026 ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2026ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | ಪ್ರೊ. ಪುಟ್ಟಣ್ಣ ಕೆ.<br>ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 4. | ಶ್ರೀ ಎನ್. ಪ್ರದೀಪ್ ಚೌಧರಿ | ಸದಸ್ಯರು |
| 5. | ಡಾ.ಡಿ.ಎಲ್. ಸಾವಿತ್ರಮ್ಮ | ಸದಸ್ಯರು |
| 6. | ಪ್ರೊ. ಉದಯ ಕುಮಾರ್ ಬಿ. | ಸದಸ್ಯರು |
| 7. | ಶ್ರೀಮತಿ ಶೃತಿ ಶೆಟ್ಟಿ | ಸದಸ್ಯರು |
| 8. | ಶ್ರೀ ಅಲೆಕ್ಸ್ ಐವನ್ ಸಿಕ್ವೇರಾ | ಸದಸ್ಯರು |
| 9. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 10. | ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ | ಸದಸ್ಯರು |
| 11. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 12. | ಶ್ರೀ ರಘುರಾಜ್ | ಸದಸ್ಯರು |
| 13. | ಶ್ರೀ ಅಚ್ಚುತ ಗಟ್ಟಿ | ಸದಸ್ಯರು |

| | | |
|---|---|---|
| 14. | ಪ್ರೊ. ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15. | ಶ್ರೀ ಪಂಚಲಿಂಗಸ್ವಾಮಿ, **ಕೆ.ಎಸ್.ಎ.ಎಸ್.,**<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು |
| 16. | ಶ್ರೀ ಸಂತೋಷ್ ಬಿ. ಜಗಲಸಾರ್, ಕೆ.ಎ.ಎಸ್. (ಹಿ.ಶ್ರೇ)<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ |

**ಅನುಪಸ್ಥಿತರು:**

| | | |
|---|---|---|
| 1. | ತಾಂತ್ರಿಕ ಶಿಕ್ಷಣ ನಿರ್ದೇಶಕರು,<br>ಕರ್ನಾಟಕ  ಸರ್ಕಾರ, ಬೆಂಗಳೂರು | ಸದಸ್ಯರು |
| 2. | ಶ್ರೀ ನಿತ್ಯಾನಂದ ವಿ. ಗಾಂವಕರ | ಸದಸ್ಯರು |
| 3. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು |
| 4. | ಡಾ. ಸಂದೇಶ್ ಕೆ.ಎಸ್<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |

## ಪ್ರಾರಂಭಿಕ

**ಪ್ರಾರಂಭದಲ್ಲಿ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಗೆ ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರು ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.**

- **ಸ್ವಾಗತ**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ:67:ಆಸೇವ:2026, ಬೆಂಗಳೂರು, ದಿನಾಂಕ: 08.07.2026ರಂತೆ ಶ್ರೀ ಸಂತೋಷ್ ಬಿ. ಜಗಲಸಾರ, ಕೆ.ಎ.ಎಸ್. (ಹಿರಿಯ ಶ್ರೇಣಿ) ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ)ರನ್ನಾಗಿ ನೇಮಕ ಮಾಡಲಾಗಿದ್ದು, ಇವರು ಸಿಂಡಿಕೇಟಿನ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 28 (1) e ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಗೌರವಾನ್ವಿತ ಕುಲಾಧಿಪತಿಯವರಿಂದ ನಾಮನಿರ್ದೇಶನಗೊಂಡಿರುವ ಶ್ರೀ ಎನ್. ಪ್ರದೀಪ್ ಚೌಧರಿ, #604, ಚಲವಾದಿ ನಿವಾಸ, ವಾಯುನಂದನ ಲೇಔಟ್, ಹೆಬ್ಬಾಳ ಕೆಂಪಾಪುರ, ಬೆಂಗಳೂರು ಹಾಗೂ ಡಾ. ಡಿ.ಎಲ್. ಸಾವಿತ್ರಮ್ಮ, ಪ್ಲಾಟ್ ನಂ. ಡಿ-5/2, ವಿಜಯಕಿರಣ ಅಪಾರ್ಟ್‌ಮೆಂಟ್ಸ್ , ವಿಕ್ಟೋರಿಯಾ ರಸ್ತೆ, ವಿಕ್ಟೋರಿಯಾ ಲೇಔಟ್, ಬೆಂಗಳೂರು ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

- **ಕೃತಜ್ಞತೆ**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 28(1)e ಯ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಗೌರವಾನ್ವಿತ ಕುಲಾಧಿಪತಿಯವರಿಂದ ನಾಮನಿರ್ದೇಶನಗೊಂಡಿದ್ದ ಡಾ. ಕೆ.ಸಿ. ಮಹದೇಶ, ಕಲ್ಮಹಳ್ಳಿ ಗ್ರಾಮ, ಕುಪ್ಪರವಳ್ಳಿ ಅಂಚೆ, ಮೈಸೂರು ತಾಲೂಕು ಮತ್ತು ಜಿಲ್ಲೆ ಹಾಗೂ ಡಾ. ಎಸ್.ಬಿ.ಎಂ. ಪ್ರಸನ್ನ, #371, ಕನ್ನಿಕಾ ಲೇಔಟ್, ರಾಮಸಂದ್ರ ಗ್ರಾಮ, ಸೂಳಿಕೆರೆ ಅಂಚೆ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ, ಬೆಂಗಳೂರು ಇವರ ಸದಸ್ಯತ್ವದ ಅವಧಿಯು ದಿನಾಂಕ 05.07.2026 ರಂದು ಕೊನೆಗೊಂಡಿರುವುದರಿಂದ ಸಿಂಡಿಕೇಟ್ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

2. ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ) ಹುದ್ದೆಯ ಪ್ರಭಾರವನ್ನು ವಹಿಸಿಕೊಂಡು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 17 (2) ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಆಡಳಿತ) ನೆಲೆಯಲ್ಲಿ ಸಿಂಡಿಕೇಟಿನ ಸದಸ್ಯ ಕಾರ್ಯದರ್ಶಿಯಾಗಿದ್ದ ಪ್ರೊ.ಗಣೇಶ್ ಸಂಜೀವ್, ಹಿರಿಯ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಇವರನ್ನು ದಿನಾಂಕ 13.07.2026 ರಂದು ಕುಲಸಚಿವರು ಹುದ್ದೆಯ ಪ್ರಭಾರದಿಂದ ಬಿಡುಗಡೆಗೊಳಿಸಲಾಗಿದೆ.

ಸದರಿಯವರೆಲ್ಲರೂ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿದ್ದು, ಇವರೆಲ್ಲರಿಗೂ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಪ್ರಾಸ್ತಾವಿಕ

**ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.**

**ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.**

1. ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಹಾಗೂ ದ.ಕ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೂ ಆಗಿರುವ ಶ್ರೀಮತಿ ತುಳಸಿ ಮದ್ದಿನೇನಿ, ಐ.ಎ.ಎಸ್., ಇವರು ದ.ಕ. ಜಿಲ್ಲಾ ಪ್ರವಾಸದ ವೇಳೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುತ್ತಿರುವ ಮಾಹಿತಿಯನ್ನು ಸಭೆಗೆ ನೀಡಲಾಯಿತು.

2. ಪದವಿ ಕಾರ್ಯಕ್ರಮಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಸ್ನಾತಕೋತ್ತರ ತರಗತಿಗಳು ಸೆಪ್ಟಂಬರ್ 1 ರಿಂದ ಪ್ರಾರಂಭವಾಗುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು.

3. ಸಾರ್ವಜನಿಕ ವಿಶ್ವವಿದ್ಯಾನಿಲಯಗಳ ಸ್ಥಿತಿಗತಿಗಳ ಬಗ್ಗೆ ಚರ್ಚಿಸಲು ಮಾನ್ಯ ಮುಖ್ಯಮಂತ್ರಿಗಳು ಸೆಪ್ಟೆಂಬರ್ 15, 2026 ರಂದು ಕುಲಪತಿಗಳ ಸಭೆ ಕರೆದಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು.

I. **ಅನುಸರಣಾ ವರದಿಯ ಅನುಮೋದನೆ**

**ದಿನಾಂಕ 02.07.2026ರಂದು ನಡೆದ ಸಿಂಡಿಕೇಟಿನ 2026ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು –**

II. **ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:1 (2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ "ಬ್ರಹ್ಮಶ್ರೀ ನಾರಾಯಣ ಗುರು - ಗಾಂಧಿ ಸಂವಾದ ಶತಮಾನೋತ್ಸವ ಆಟದ ಮೈದಾನ"ದಲ್ಲಿ ಸಾರ್ವಜನಿಕ ಉದ್ಯಾನವನ ನಿರ್ಮಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** "ಬ್ರಹ್ಮಶ್ರೀ ನಾರಾಯಣ ಗುರು - ಗಾಂಧಿ ಸಂವಾದ ಶತಮಾನೋತ್ಸವ ಆಟದ ಮೈದಾನ" ವೆಂದು ನಾಮಕರಣ ಮಾಡಿ, ಮೈದಾನದ ಅಭಿವೃದ್ಧಿಗೆ ಹಾಗೂ ಸುತ್ತ ಆವರಣ ಗೋಡೆ ನಿರ್ಮಿಸಲು ಈಗಾಗಲೇ ಸಿಂಡಿಕೇಟಿನಲ್ಲಿ ನಿರ್ಣಯ ಕೈಗೊಂಡಿರುವುದರಿಂದ, ವಿಶ್ವವಿದ್ಯಾನಿಲಯಕ್ಕೆ ಆಟದ ಮೈದಾನದ ಅಗತ್ಯವೂ ಇರುವುದರಿಂದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ವತಿಯಿಂದ ಸಾರ್ವಜನಿಕ ಉದ್ಯಾನವನ ನಿರ್ಮಾಣದ ಕುರಿತು "ನಿರಾಕ್ಷೇಪಣಾ ಪತ್ರ" ನೀಡುವ ಬಗ್ಗೆ ಕಾನೂನು ತಜ್ಞರಿಂದ ಅಭಿಪ್ರಾಯ ಪಡೆದು ಪ್ರಸ್ತಾವನೆಯನ್ನು ಮರು ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.5:2 (2026)

ವಿಷಯ: ಲೆಕ್ಕ ಶೀರ್ಷಿಕೆ 1416 ರಡಿಯಲ್ಲಿ Disposal of Waste collected in dustbins at Mangalore University Campus, Mangalagangothri - ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:3 (2026)

ವಿಷಯ: ಯು.ಜಿ.ಸಿ. ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ / ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕಅಳುವಾರ ಇಲ್ಲಿನ ಬೋಧಕರಿಗೆ ವೃತ್ತಿ ಪದೋನ್ನತಿ - ಆಯ್ಕೆ ಸಮಿತಿ / ಸ್ಕ್ರೀನಿಂಗ್- ಕಂ-ಇವ್ಯಾಲ್ಯೂವೇಶನ್ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:4 (2026)

ವಿಷಯ: ಡಾ. ಮಹಮ್ಮದ್ ಶಫಿಯುಲ್ಲ್ ಮುಸ್ತಕ್ ಬಿ., ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರಿಗೆ Singapore ಇಲ್ಲಿ ನಡೆಯುವ ವಿಚಾರ ಸಂಕಿರಣದಲ್ಲಿ ಭಾಗವಹಿಸಲು ಘಟನೋತ್ತರ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:5 (2026)

ವಿಷಯ: ಶ್ರೀ ಪ್ರವೀಣ್ ಕುಮಾರ್ ಜೆ.ಪಿ., ಮೆಕ್ಯಾನಿಕ್, ಕಾರ್ಯಕಾರಿ ಅಭಿಯಂತರರ ಕಛೇರಿ ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಶಾಖೆಗೆ ಒಪ್ಪಂದದ ಆಧಾರದ ಮೇಲೆ ನೇಮಕ ಮಾಡುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:6 (2026)

ವಿಷಯ: ಶ್ರೀ ಬಸವಣ್ಣ ಆರ್., ಕಿರಿಯ ಅಭಿಯಂತರರು (ವಿದ್ಯುತ್) ಇವರನ್ನು ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಕಿರಿಯ ಅಭಿಯಂತರರು (ವಿದ್ಯುತ್) ಹುದ್ದೆಗೆ ವರ್ಗಾಯಿಸುವ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

**ನಿರ್ಣಯ:** ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್ ವಿಶ್ವವಿದ್ಯಾನಿಲಯದಲ್ಲಿ ಕಿರಿಯ ಅಭಿಯಂತರರು (ವಿದ್ಯುತ್) ಹುದ್ದೆ ಖಾಲಿ ಇರುವ ಬಗ್ಗೆ ಯಾವುದೇ ದೃಢೀಕರಣ ನೀಡಿರುವುದಿಲ್ಲ. ಸದರಿ ವಿಶ್ವವಿದ್ಯಾನಿಲಯವು ಕಿರಿಯ ಅಭಿಯಂತರರು (ವಿದ್ಯುತ್) ಹುದ್ದೆ ಖಾಲಿ ಇರುವ ಬಗ್ಗೆ ಹಾಗೂ ಶ್ರೀ ಬಸವಣ್ಣ ಆರ್. ಇವರನ್ನು ಕಿರಿಯ ಅಭಿಯಂತರರು (ವಿದ್ಯುತ್) ಹುದ್ದೆಗೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆ ಮೂಲಕ ನೇಮಕ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹಣಕಾಸು:ಸಾ.ಸ.5:7 (2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಮೇಲಿನ ಅನುಪಾಲನಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ವಿವರವಾಗಿ ಚರ್ಚಿಸಿ ಅನುಮೋದನೆ ನೀಡಲಾಯಿತು. ಈ ಬಗ್ಗೆ ಲೆಕ್ಕ ಪರಿಶೋಧಕರು ವಸೂಲಾತಿಗೆ ಸೂಚಿಸಿರುವ ಕಂಡಿಕೆಗಳಲ್ಲಿ ವಸೂಲಾತಿ ಮಾಡಲಾಗಿರುವ ಮೊತ್ತದ ವಿವರಗಳನ್ನು ಎಲ್ಲಾ ಸಿಂಡಿಕೇಟು ಸದಸ್ಯರುಗಳಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಹಣಕಾಸು:ಸಾ.ಸ.5:8 (2026)

ವಿಷಯ: 2025-26ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ.

**ನಿರ್ಣಯ:** ವಾರ್ಷಿಕ ಲೆಕ್ಕಪತ್ರಗಳ ಬಗ್ಗೆ ವಿವರವಾಗಿ ಚರ್ಚಿಸಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ :ಸಾ.ಸ.5:9 (2026)

ವಿಷಯ: ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಘಟಕದಿಂದ ವಿವಿಧ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಲ್ಲಿ ಇರಿಸಲಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕ್ಷೇಮಾಭ್ಯುದಯ ನಿಧಿ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾಗುವ ಶಿಷ್ಯವೇತನದ ಅನುದಾನವನ್ನು ಒಳಗೊಂಡು ನೀಡಲಾಗುತ್ತಿರುವ ಸವಲತ್ತುಗಳನ್ನು ಮುಂದುವರಿಸುವ ಬಗ್ಗೆ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಸ್ಥಾಯಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು. ವಿದ್ಯಾರ್ಥಿಗಳಿಗಾಗಿ ನಡೆಯಲಿರುವ Orientation Programme ನಲ್ಲಿ ಶಿಷ್ಯವೇತನ ಹಾಗೂ ಇತರೆ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವ ಕ್ರಮದ ಬಗ್ಗೆ ಮಾಹಿತಿ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.5:10 (2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ಉಪಯೋಗಕ್ಕೆ ಖರೀದಿಸಲಾಗಿರುವ Toyota Innova Crysta ZX 7S TAN ಹೊಸ ವಾಹನದ ನೋಂದಣಿ ಶುಲ್ಕ ಪಾವತಿಗೆ ಘಟನೋತ್ತರ ಅನುಮೋದನೆ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:11 (2026)

ವಿಷಯ: ಅಧ್ಯಯನ ಮಂಡಳಿಗಳ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:12 (2026)

ವಿಷಯ: ಪದವಿ ಮತ್ತು ಸ್ನಾತಕೋತ್ತರ ಫುಡ್ ಸೈನ್ಸ್ ಮತ್ತು ಟೆಕ್ನಾಲಜಿ (Food Science and Technology) ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:13 (2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಪಿಹೆಚ್.ಡಿ. ಕಾರ್ಯಕ್ರಮದ ಪ್ರವೇಶಾತಿ ಪ್ರಕ್ರಿಯೆ ಬಗ್ಗೆ ನಡೆದ ಕೆಲವು ಘಟನೆಗಳು ಹಾಗೂ ಮಾಧ್ಯಮಗಳಲ್ಲಿ ಮತ್ತು ಕೆಲವು ಪತ್ರಿಕೆಗಳಲ್ಲಿ ಬಂದ ವರದಿ ಹಾಗೂ ಗೌರವಾನ್ವಿತ ರಾಜ್ಯಪಾಲರಿಗೆ ದೂರು ಸಲ್ಲಿಕೆಯಾಗಿರುವ ಬಗ್ಗೆ.

**ನಿರ್ಣಯ:** ವಿಚಾರಣಾ ವರದಿಯನ್ನು ಸಿಂಡಿಕೇಟು ಸಭೆಗೆ ಮಂಡಿಸಿ ವಿವರವಾಗಿ ಚರ್ಚಿಸಲಾಯಿತು. ವಿಚಾರಣಾ ವರದಿಯಲ್ಲಿದ್ದ ಅಂಶಗಳ ಕುರಿತು ಹೆಚ್ಚಿನ ಮಾಹಿತಿ ಹಾಗೂ ಚರ್ಚೆ ಅಗತ್ಯ ಇರುವ ಹಿನ್ನೆಲೆಯಲ್ಲಿ ವರದಿಯನ್ನು ಕೂಲಂಕಷವಾಗಿ ಪರಾಮರ್ಶಿಸಲು ಕುಲಸಚಿವರು (ಆಡಳಿತ) ಇವರಿಗೆ ವಹಿಸಿ ಅವರ ಅಭಿಪ್ರಾಯದೊಂದಿಗೆ ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:14(2026)

ವಿಷಯ: ಡಾ. ಯಶಸ್ವಿನಿ ಬಿ., ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ : 794/2023 (S-RES) ಕುರಿತು ವಿಶ್ವವಿದ್ಯಾನಿಲಯದ ವತಿಯಿಂದ ಮುಂದಿನ ಕ್ರಮಕೈಗೊಳ್ಳುವ ಬಗ್ಗೆ.

**ನಿರ್ಣಯ:** ವಿಚಾರಣಾ ವರದಿಯನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಸದರಿಯವರ ವಿರುದ್ಧ ವಿಶ್ವವಿದ್ಯಾನಿಲಯದ CCA ನಿಯಮಾವಳಿಯನ್ವಯ ಕ್ರಮ ಜರುಗಿಸುವ ಬಗ್ಗೆ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:15(2026)

ವಿಷಯ: CARER ಕೇಂದ್ರದ ಪ್ರಯೋಗಾಲಯಕ್ಕೆ ಅಗತ್ಯವಿರುವ ಗ್ಲಾಸ್‌ವೇರ್‌ಗಳನ್ನು CARER Generated Grant - 715 ರಿಂದ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:16(2026)

ವಿಷಯ: CARER ಕೇಂದ್ರದ ಪ್ರಯೋಗಾಲಯಕ್ಕೆ ಅಗತ್ಯವಿರುವ ವಿಶೇಷ ಗ್ಲಾಸ್‌ವೇರ್‌ಗಳನ್ನು CARER Generated Grant - 715 ರಿಂದ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:17(2026)

ವಿಷಯ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ - ಪದವಿ (ಮೊದಲನೇ ಹಾಗೂ ಎರಡನೇ ಚತುರ್ಮಾಸ) ಪಠ್ಯಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಪುಸ್ತಕಗಳ ಮುದ್ರಣದ ಗುಣಮಟ್ಟದ ಬಗ್ಗೆ ಸಿಂಡಿಕೇಟು ಮೆಚ್ಚುಗೆ ವ್ಯಕ್ತಪಡಿಸಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:18(2026)

ವಿಷಯ: ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NME-ICT ಯೋಜನೆಯಡಿ ಭಾರತ ಸಂಚಾರ ನಿಗಮ ಲಿ. (BSNL) ನಿಂದ 1 Gbps Internet Connectivity ಯ ಶುಲ್ಕ ಪಾವತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಬಿ.ಎಸ್.ಎನ್.ಎಲ್. ವತಿಯಿಂದ ವಿಶ್ವವಿದ್ಯಾನಿಲಯದ ಪರಿಸರದಲ್ಲಿ ಮೊಬೈಲ್ ಟವರ್ ನಿರ್ಮಾಣ ಮಾಡುವ ಮೂಲಕ ಮೊಬೈಲ್ ನೆಟ್ ವರ್ಕ್ ಸುಧಾರಿಸಲು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:19(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು New Mangalore Port Authority (NMPA), ಮಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:20(2026)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಜೂನ್/ಜುಲೈ 2026ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** IQAC ವಿಭಾಗದ ಕಾರ್ಯವೈಖರಿಯನ್ನು ಸಿಂಡಿಕೇಟು ಸದಸ್ಯರಾದ ಡೀನರು ಮಂಡಿಸಿದರು. IQAC ವಿಭಾಗದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.5:21(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಅಧಿಕಾರಿಗಳ ಆರ್ಥಿಕ / ಆಡಳಿತಾತ್ಮಕ ಅಧಿಕಾರ ಪ್ರತ್ಯಾಯೋಜನೆಯ ಪರಿನಿಯಮದ ಬಗ್ಗೆ.

**ನಿರ್ಣಯ:** ಪರಿನಿಯಮದಲ್ಲಿ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರ ಕ್ರಮ ಸಂಖ್ಯೆ 7 ರಲ್ಲಿ ನಿಗದಿ ಪಡಿಸಿರುವ ಮೊತ್ತ ರೂ. 5,000 ವನ್ನು ವಿಶ್ವವಿದ್ಯಾನಿಲಯದ ಇತರೆ ಅಧಿಕಾರಿಗಳಿಗಿರುವಂತೆ ರೂ.25,000.00 ಕ್ಕೆ ಹೆಚ್ಚಿಸುವ ತಿದ್ದುಪಡಿಯೊಂದಿಗೆ ಅನುಮೋದನೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.5:22(2026)

ವಿಷಯ: "THE MANGALORE UNIVERSITY EMPLOYEES MEDICAL ATTENDANCE STATUTE (Framed under section 40(o) of K.S.U. Act 2000 in accordance with Karnataka Government Servant's (Medical Attendance) Rules 1963" ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:23(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಬೆಳಪು ಗ್ರಾಮದಲ್ಲಿ ನಿರ್ಮಿಸಲಾಗುತ್ತಿರುವ ಅತ್ಯಾಧುನಿಕ ವಿಜ್ಞಾನ ಸಂಶೋಧನಾ ಕೇಂದ್ರ ಕಟ್ಟಡ ಕಾಮಗಾರಿಯ ಬಗ್ಗೆ.

**ನಿರ್ಣಯ:** ಈ ಕುರಿತು ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು. ಸದರಿ ಕೇಂದ್ರ ನಿರ್ಮಾಣವಾಗುತ್ತಿರುವ ಜಾಗವು ವಿಶ್ವವಿದ್ಯಾನಿಲಯದ ಆಸ್ತಿಯಾಗಿದ್ದು, ಆಸ್ತಿ ಪರಭಾರೆ ಆಗದ ರೀತಿಯಲ್ಲಿ ಹಾಗೂ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕವಾಗಿಯೂ ಅನುಕೂಲವಾಗುವ ರೀತಿಯಲ್ಲಿ ದರ ನಿಗದಿಪಡಿಸಿ ದೀರ್ಘಾವಧಿ ಲೀಸ್ ನೀಡುವ ಮೂಲಕ ಕ್ರೀಡಾ ಅಕಾಡೆಮಿಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟು ಸದಸ್ಯರು ನೀಡಿದ ಸಲಹೆಯನ್ನು ಒಪ್ಪಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:24(2026)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾದ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಸಂಯೋಜಕರ ಗೌರವ ಸಂಭಾವನೆ ಪಾವತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:25(2026)

ವಿಷಯ: ಶ್ರೀ ಅಚ್ಚುತ ಗಟ್ಟಿ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1: ಸಮಾಜಕಾರ್ಯ ವಿದ್ಯಾರ್ಥಿಗಳಿಗೆ (M.S.W.) ಹಾಗೂ ಇತರ ವಿಭಾಗಗಳ ವಿದ್ಯಾರ್ಥಿಗಳಿಗೆ ಸಮುದಾಯ ಸಂಘಟನೆ ಮತ್ತು ಸಾಮಾಜಿಕ ಕ್ರಿಯೆ (Community Organization and Social Action) ಹಳ್ಳಿಗಳ ಮೌಲ್ಯಯುತ ಜೀವನ ಪದ್ಧತಿ, ಹಳ್ಳಿಗರ ಸಾಂಪ್ರದಾಯಿಕ ಜ್ಞಾನ ಪದ್ಧತಿಯನ್ನು ಇಂದಿನ ತಂತ್ರಜ್ಞಾನಕ್ಕೆ ಒಗ್ಗಿಸಿಕೊಳ್ಳುವುದು ಕೌಶಲ್ಯ ಅಭಿವೃದ್ಧಿ ತರಬೇತಿ ನೀಡುವುದು (Skill Development) ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ವಿದ್ಯಾರ್ಥಿಗಳಿಗೆ ಪ್ರತಿ ವರ್ಷ 15 ದಿನಗಳ ಗ್ರಾಮೀಣ ವಾಸ್ತವ್ಯದೊಂದಿಗೆ ಗ್ರಾಮೀಣ ಸ್ಥಿತಿಗತಿಗಳ

ಕುರಿತು ವಿಶ್ವವಿದ್ಯಾನಿಲಯದ ವಿವಿಧ ಪೀಠಗಳ ಸಹಯೋಗದೊಂದಿಗೆ ಅಧ್ಯಯನ ನಡೆಸಿ ಸರಕಾರಕ್ಕೆ ಅಧಿಕೃತ ವರದಿ ನೀಡಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ವಿಶ್ವವಿದ್ಯಾನಿಲಯವು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಮಾಹಿತಿಯನ್ನು ನೀಡಲಾಯಿತು.

**ವಿಷಯ 2 :** ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇಲ್ಲಿನ ಕಟ್ಟಡಗಳು ಅನೇಕ ಕಡೆ ಸೋರುತ್ತಿರುವುದರಿಂದ ತುರ್ತು ದುರಸ್ತಿಗೆ ಅನುದಾನ ಒದಗಿಸುವುದು ಹಾಗೂ ಮುಂದಿನ ವರ್ಷದಿಂದ ವಿಶ್ವವಿದ್ಯಾನಿಲಯ ಕಾಲೇಜಿನ ದುರಸ್ತಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡುವುದು. ಸ್ಟೇಶನರಿ ಹಾಗೂ ತರಗತಿಗಳಿಗೆ ಬೇಕಾದ Contingency ಮೊತ್ತವನ್ನು ತಿಂಗಳಿಗೆ ರೂ.10,000/- ದಿಂದ ರೂ. 25,000/ ನಿಗದಿಪಡಿಸಬೇಕಾಗಿ ಪ್ರಸ್ತಾವನೆ.

**ನಿರ್ಣಯ:** ವಿವಿಧ ಕಟ್ಟಡಗಳ ದುರಸ್ತಿಯ ಬಗ್ಗೆ ಈಗಾಗಲೇ ಕೈಗೊಂಡಿರುವ ಕ್ರಮಗಳ ವಿವರವನ್ನು ಸಭೆಗೆ ನೀಡಲಾಯಿತು.

ವಿಷಯ 3: ಮಂಗಳೂರು ವಿಶ್ವವಿದ್ಯಾನಿಲಯದ 24 ಅಧ್ಯಯನ ಪೀಠಗಳ ನಿರ್ದೇಶಕರು ಹಾಗೂ ಸದಸ್ಯರುಗಳ ಆಯ್ಕೆ ವಿವರಗಳನ್ನು ಸಭೆಗೆ ಮಂಡಿಸುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ಅಧ್ಯಯನ ಪೀಠಗಳ ನಿರ್ದೇಶಕರ ಹಾಗೂ ಸದಸ್ಯರ ಆಯ್ಕೆ ವಿವರಗಳನ್ನು ಮಾನ್ಯ ಸದಸ್ಯರಿಗೆ ನೀಡಲಾಯಿತು.

ವಿಷಯ 4: ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ವಿಶ್ವಮಂಗಳ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ರಚನೆಯ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ತನಿಖೆ ಮಾಡಿಸಿರುವ ವರದಿಯನ್ನು ಸಭೆಗೆ ಮಂಡಿಸುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ವಿಶ್ವವಿದ್ಯಾನಿಲಯದ ಸಿಂಡಿಕೇಟು ಸದಸ್ಯರ ನೆಲೆಯಲ್ಲಿ ವಿಶ್ವಮಂಗಳ ಎಜ್ಯುಕೇಶನಲ್ ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರಾಗಿರುವ ಮಾನ್ಯ ಶ್ರೀ ರಘುರಾಜ್ ರವರು ವಿಶ್ವವಿದ್ಯಾನಿಲಯದೊಂದಿಗೆ ವಿಶ್ವಮಂಗಳ ವಿದ್ಯಾ

ಸಂಸ್ಥೆಯ ಆಡಳಿತ ಮಂಡಳಿಯು ಹೊಂದಿರುವ ಬಿನ್ನಾಭಿಪ್ರಾಯವನ್ನು ಶಮನಗೊಳಿಸುವ ನಿಟ್ಟಿನಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳಲು ವಿಶ್ವಮಂಗಳ ಎಜ್ಯುಕೇಶನ್ ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಮಾನ್ಯ ಕುಲಪತಿಯವರು ಸಭೆ ನಡೆಸಲು ದಿನಾಂಕ ನಿಗದಿಪಡಿಸುವಂತೆ ವಿನಂತಿಸಿದರು. ಈ ಬಗ್ಗೆ ಮಾನ್ಯ ಕುಲಪತಿಯವರು ಸಮ್ಮತಿಸಿದರು.

ವಿಷಯ 5: ನೆಹರು ಅಧ್ಯಯನ ಪೀಠದಿಂದ ಯುವ ಜನಾಂಗಕ್ಕೆ ನೆಹರುರವರ ನಾಯಕತ್ವ, ಪಂಚಶೀಲ ತತ್ವಗಳು, ಭಾರತದ ಅಭಿವೃದ್ಧಿಗೆ ನೆಹರೂರರವರ ಕೊಡುಗೆಗಳ ಬಗ್ಗೆ 2 ದಿನಗಳ ತರಭೇತಿ ಕಾರ್ಯಗಾರ ನಡೆಸುವ ಕಾರ್ಯಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ನೆಹರು ಅಧ್ಯಯನ ಪೀಠದಿಂದ ಹಮ್ಮಿಕೊಳ್ಳಲಾಗುತ್ತಿರುವ ಕಾರ್ಯಕ್ರಮಗಳ ವಿವರವನ್ನು ನೀಡಲಾಯಿತು. ಸದರಿ ಕಾರ್ಯಕ್ರಮಗಳ ಯಶಸ್ಸಿಗೆ ಪೂರ್ಣ ಸಹಕಾರವನ್ನು ನೀಡುವಂತೆ ಸರ್ಕಾರದ ನಾಮನಿರ್ದೇಶಿತ ಸದಸ್ಯರನ್ನು ಕೋರಲಾಯಿತು.

ವಿಷಯ 6: ನಾರಾಯಣ ಗುರು ಅಧ್ಯಯನ ಪೀಠದ ವತಿಯಿಂದ ನಾರಾಯಣ ಗುರುಗಳ ಜಾತ್ಯಾತೀತ ತತ್ವಗಳು ನಾರಾಯಣ ಗುರುಗಳ ಜೀವನ ಆದರ್ಶ ತತ್ವಗಳು, ಮಹಿಳಾ ಸಬಲೀಕರಣ ಕಾಳಜಿ, ಸಾಮಾಜಿಕ ಸುಧಾರಣೆಗಳ ಬಗ್ಗೆ ಯುವ ಜನಾಂಗಕ್ಕೆ ಹಾಗೂ ಮಹಿಳೆಯರಿಗೆ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ಅಧ್ಯಯನ ಪೀಠದ ನೂತನ ನಿರ್ದೇಶಕರ ನೇಮಕಾತಿಯ ಬಳಿಕ ವಿವಿಧ ಕಾರ್ಯಕ್ರಮಗಳ ರೂಪುರೇಷೆಗಳನ್ನು ತಯಾರಿಸಲು ಸೂಚಿಸುವುದಾಗಿ ಸಭೆಗೆ ತಿಳಿಸಲಾಯಿತು.

ವಿಷಯ 7: 4ನೇ ಸಿಂಡಿಕೇಟ್ ಸಭೆಯ ಕಾರ್ಯಸೂಚಿ 4:9 ರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ.

**ನಿರ್ಣಯ:** ಪೂರ್ಣಾವಧಿ ವೈದ್ಯಾಧಿಕಾರಿಯವರನ್ನು ನೇಮಿಸುವ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಡಿಸಿ:ಸಾ.ಸ.5:26(2026)

ವಿಷಯ: ಶೈಕ್ಷಣಿಕ ವರ್ಷ 2026-27ನೇ ಸಾಲಿಗೆ ಪ್ರೆಸ್ಟೀಜ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಆಂಡ್ ಇನ್ನೋವೇಶನ್, ಜಪ್ಪಿನ ಮೊಗರು, ಮಂಗಳೂರು ಎಂಬ ವಿದ್ಯಾಸಂಸ್ಥೆಗೆ ಹೊಸ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.5:27(2026)

ವಿಷಯ: ಶೈಕ್ಷಣಿಕ ವರ್ಷ 2026-27ನೇ ಸಾಲಿನಲ್ಲಿ ಸ್ವಾಯತ್ತ ಕಾಲೇಜುಗಳಲ್ಲಿ ಪ್ರಾರಂಭಿಸಿರುವ ಹೊಸ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳು ಮತ್ತು ಭಾಷಾ ವಿಷಯಗಳಿಗೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:28(2026)

ವಿಷಯ: ಶ್ರೀ ರಘುರಾಜ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

"ಪಿಹೆಚ್.ಡಿ. ಸಂಶೋಧನೆ ನಡೆಸಲು ಈ ವರ್ಷದ ಸಾಲಿಗೆ ಅಧಿಸೂಚನೆ ಹೊರಡಿಸಲಾಗಿದೆ. ಪಿಹೆಚ್.ಡಿ. ಮಾರ್ಗದರ್ಶನ ಮಾಡುವವರು ವಿಶ್ವವಿದ್ಯಾನಿಲಯದಲ್ಲಿ ಕೊರತೆ ಇರುವ ಹಿನ್ನಲೆ, ಡಾಕ್ಟರೇಟ್ ಪಡೆದ ಹಿರಿಯ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಉಪನ್ಯಾಸಕರ ನೇಮಿಸುವುದರ ಬಗ್ಗೆ ಈ ಹಿಂದೆ ಸಿಂಡಿಕೇಟ್ ವಿದ್ಯಾರ್ಥಿಗಳ ಭವಿಷ್ಯಕ್ಕೆ ವಿಶ್ವವಿದ್ಯಾನಿಲಯ ಆಸರೆಯಾಗಬೇಕೆಂಬ ನಿರ್ಣಯ ಕೈಗೊಂಡಂತೆ, ಸರ್ಕಾರಕ್ಕೆ ಮತ್ತು ರಾಜ್ಯಪಾಲರಿಗೆ ಈ ಸಂಬಂಧ ಮಾಹಿತಿ ನೀಡಲಾಗಿದೆಯೇ ಇದ್ದರೆ ಅದರ ವಿವರ ಮತ್ತು ಇದಕ್ಕೆ ಬಂದಿರುವ ನಿರ್ದೇಶನವಿದ್ದರೆ ಅದರ ಮಾಹಿತಿ ನೀಡುವುದು ಮತ್ತು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸುವುದು".

**ನಿರ್ಣಯ:** ಈ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಲಾಯಿತು.

**ಇತರೆ ವಿಷಯಗಳು:**

1) ಮಾನ್ಯ ಸದಸ್ಯರುಗಳ ಕೋರಿಕೆ ಮೇರೆಗೆ, ಸಿಂಡಿಕೇಟಿನ ವಿಶೇಷ ಸಭೆಯನ್ನು ನಡೆಸಲು ನಿರ್ಣಯಿಸಲಾಯಿತು.

2) ಮುಂದಿನ ಸಿಂಡಿಕೇಟ್ ವಿಶೇಷ ಸಭೆಯ ನಂತರ ವಿಶ್ವವಿದ್ಯಾನಿಲಯದ ಉನ್ನತ ಸಂಶೋಧನಾ ಕೇಂದ್ರವಾದ CARER ಕೇಂದ್ರಕ್ಕೆ ಭೇಟಿ ನೀಡಲು ಸಿಂಡಿಕೇಟ್ ಸದಸ್ಯರನ್ನು ಮಾನ್ಯ ಕುಲಪತಿಯವರು ವಿನಂತಿಸಿದರು.

3) ಯುವ ಸಮುದಾಯದಲ್ಲಿ ಪ್ರಚಲಿತವಿರುವ Instagram, facebook ಮತ್ತು X ನಲ್ಲಿ ವಿಶ್ವವಿದ್ಯಾನಿಲಯದ ಬಗ್ಗೆ ವಿವಿಧ ಮಾಹಿತಿಯನ್ನು ಹಾಗೂ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ವಿವಿಧ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವ ಮೂಲಕ ಸಾಮಾಜಿಕ ಜಾಲತಾಣವನ್ನು ವಿಶ್ವವಿದ್ಯಾನಿಲಯವು ಸಮಗ್ರವಾಗಿ ಬಳಸಿಕೊಳ್ಳುವ ಬಗ್ಗೆ ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿಯವರು ನೀಡಿದ ಸಲಹೆಯನ್ನು ಒಪ್ಪಲಾಯಿತು. ವಿಶ್ವವಿದ್ಯಾನಿಲಯದ ಸಾಮಾಜಿಕ ಜಾಲತಾಣದ ಬಲವರ್ಧನೆಯ ಬಗ್ಗೆ ಈಗಾಗಲೇ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಕುಲಸಚಿವರು ಸಭೆಗೆ ಮಾಹಿತಿ ನೀಡಿದರು.

4) ಇತ್ತೀಚೆಗೆ ಕರ್ನಾಟಕ ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಗೆ ಹಮ್ಮಿಕೊಳ್ಳಲಾದ ತರಬೇತಿಯ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು. ವಿಶ್ವವಿದ್ಯಾನಿಲಯಗಳ ಕಡತ ವಿಲೇವಾರಿಯನ್ನು ಶೇ. 100 e-Office ಮೂಲಕ ನಿರ್ವಹಿಸುವಂತೆ ನೀಡಿರುವ ಸೂಚನೆಯನ್ನು ಅನುಷ್ಠಾನಗೊಳಿಸಲು ನಿರ್ಣಯಿಸಿರುವುದಾಗಿ ಸಭೆಗೆ ಮಾಹಿತಿ ನೀಡಲಾಯಿತು.

5) ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಯ ಕಾರ್ಯಸೂಚಿಗಳನ್ನು ಮುಂದಿನ ದಿನಗಳಲ್ಲಿ ಕಾಗದರಹಿತವಾಗಿ (Softcopy ಮೂಲಕ) ನೀಡುವ ಬಗ್ಗೆ ಸಭೆಗೆ ತಿಳಿಸಲಾಯಿತು.

6) ಈ ಹಿಂದೆ ಪ್ರಭಾರ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದ ಪ್ರೊ. ಗಣೇಶ್ ಸಂಜೀವ್ ಇವರ ಕಾರ್ಯವೈಖರಿಯ ಬಗ್ಗೆ ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ರವರು ಮೆಚ್ಚುಗೆ ವ್ಯಕ್ತಪಡಿಸಿ ಸದರಿಯವರು ನೀಡುತ್ತಿದ್ದ ಸ್ಪಂದನೆ, ಕಾರ್ಯಚತುರತೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

7) ನೂತನವಾಗಿ ಕುಲಸಚಿವರು (ಆಡಳಿತ) ಆಗಿ ಅಧಿಕಾರ ಸ್ವೀಕರಿಸಿರುವ ಶ್ರೀ ಸಂತೋಷ್ ಬಿ. ಜಗಲಸಾರ, ಕೆ.ಎ.ಎಸ್., (ಹಿರಿಯ ಶ್ರೇಣಿ) ಇವಘರು ಅಧಿಕಾರ ಸ್ವೀಕರಿಸಿ ಕೇವಲ ಕೆಲವೇ ದಿನಗಳಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಸ್ಥಳಗಳಿಗೆ ಭೇಟಿ ನೀಡಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ರಘುರಾಜ್ ಹಾಗೂ ಶ್ರೀ ಅಚ್ಯುತ ಗಟ್ಟಿಯವರು ಸಭೆಗೆ ತಿಳಿಸಿದರು. ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಶಿಸ್ತು ಮೂಡಿಸಿರುವ ಇವರು ತಮ್ಮ ಸೇವಾವಧಿಯಲ್ಲಿ ವಿಶ್ವವಿದ್ಯಾನಿಲಯದ ಘನತೆಯನ್ನು ಹೆಚ್ಚಿಸುವಂತಾಗಲಿ ಎಂದು ಶುಭ ಹಾರೈಸಿದರು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |